ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು ಪ್ರದನ್ಯಾದಂ.,ರವರ ನ್ಯಾಯಾಲಯ, ಕಡೂರು

**ಸಿ.ಸಿ.ನಂ.1359/2017.**

ದಿನಾಂಕಃ**18.11.2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು

| | | |
|---|---|---|
| ಸಾಕ್ಷಿಯ ಹೆಸರು | ವೆಂಕಟೇಶ್ | ಚಾಸಾ-1, ಪ್ರಾಸಾ-1 |
| ತಂದೆಯ ಹೆಸರು | ಪ್ರಕಾಶ್ ಗುಪ್ತಾ | |
| ವಯಸ್ಸು | 43 ವರ್ಷ | |
| ಉದ್ಯೋಗ | ಮೆಡಿಕಲ್ ಶಾಪ್ ಮತ್ತು ಅಡಿಕೆ ವ್ಯಾಪಾರ | |
| ವಾಸ | ಕಡೂರು | |

ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 2 ಗೊತ್ತು, ಚಾಸಾ 3, 4 ನನಗೆ ಗೊತ್ತಿಲ್ಲ. 2 ನೇ ಆರೋಪಿ ನನಗೆ ಗೊತ್ತಿಲ್ಲ. ಬೇರ್ಪಡಿಸಲಾದ 3 ನೇ ಆರೋಪಿ ಹಾಗೂ 1 ನೇ ಆರೋಪಿ ನನಗೆ ಗೊತ್ತಿಲ್ಲ. ಈ ಪ್ರಕರಣದ ಬಗ್ಗೆ ನನಗೆ ಯಾವುದೇ ಮಾಹಿತಿ ಇರುವುದಿಲ್ಲ. ನನ್ನ ಮತ್ತು 1 ರಿಂದ 3 ನೇ ಆರೋಪಿತರ ನಡುವೆ ಯಾವುದೇ ಗಲಾಟೆಯಾಗಿರುವುದಿಲ್ಲ. ಆರೋಪಿತರು ನನಗೆ ಮತ್ತು ಚಾಸಾ 2 ರವರಿಗೆ ಅವಾಚ್ಯವಾಗಿ ಬೈದಿಲ್ಲ, ಚಾಸಾ 2 ರವರಿಗೆ ಮಚ್ಚಿನಿಂದ ಹಲ್ಲೆ ಮಾಡಿಲ್ಲ ಮತ್ತು ಯಾವುದೇ ಕೊಲೆ ಬೆದರಿಕೆ ಹಾಕಿಲ್ಲ. ನಾನು ಪೊಲೀಸರಿಗೆ ಯಾವುದೇ ದೂರು ನೀಡಿರುವುದಿಲ್ಲ.

ಈಗ ನೋಡುತ್ತಿರುವ ದಾಖಲೆಯಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಯು ದೂರು ಆಗಿದ್ದು ಅದನ್ನು ನಿಪಿ-1 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-1(ಎ) ಎಂದು ಗುರುತಿಸಲಾಯಿತು. ನಿಪಿ1 ರಲ್ಲಿ ಬರೆದಿರುವ ವಿಚಾರಗಳು ನನಗೆ ನೆನಪಿಲ್ಲ.

ಈಗ ನೋಡುತ್ತಿರುವ ಇನ್ನೊಂದು ದಾಖಲೆಯಲ್ಲಿ ನನ್ನ ಸಹಿ ಇದೆ, ಸದರಿ ದಾಖಲೆಯು ಮಹಜರ್ ಆಗಿದ್ದು ಅದನ್ನು ನಿಪಿ-2 ಮತ್ತು ಸಾಕ್ಷಿಯ ಸಹಿಯನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ನಿಪಿ2 ರಲ್ಲಿ ಬರೆದಿರುವ ವಿಚಾರಗಳು ನನಗೆ ಗೊತ್ತಿಲ್ಲ.

ಸಾಕ್ಷಿಯು ಈಗ ನೋಡುತ್ತಿರುವ ಪೋಟೋದಲ್ಲಿ ತನ್ನ ಇರುವಿಕೆಯನ್ನು ನೋಡಿ ಗುರುತಿಸಿದರು, ಅದನ್ನು ನಿಪಿ3, 4 ಎಂದು ಗುರುತಿಸಲಾಯಿತು. ನಿಪಿ 3, 4 ನ್ನು ಯಾವ

ಉದ್ದೇಶಕ್ಕಾಗಿ ತೆಗೆದಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಸದರಿ ದಾಖಲೆಗೆ ಯಾವ ಕಾರಣಕ್ಕೆ ಸಹಿ ಪಡೆದರು ಎಂದು ನನಗೆ ಗೊತ್ತಿಲ್ಲ, ಪೊಲೀಸರು ಹೇಳಿದ್ದಕ್ಕೆ ನಾನು ಸಹಿ ಮಾಡಿರುತ್ತೇನೆ.

**(ಈ ಹಂತದಲ್ಲಿ ಸಾಕ್ಷಿಯು ಅಭಿಯೋಜನೆಯ ಪ್ರಕರಣಕ್ಕೆ ಪ್ರತಿಕೂಲವಾಗಿ ಸಾಕ್ಷ್ಯ ನುಡಿದಿರುವುದರಿಂದ ಸಹಾಯಕ ಸರ್ಕಾರಿ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯನ್ನಾಗಿ ಪರಿಗಣಿಸಿ, ಪಾಟೀ ಸವಾಲನ್ನು ಮಾಡಲು ಮಾನ್ಯ ಸ ಸ ಅ ರವರು ಅನುಮತಿಯನ್ನು ಕೋರಿದ್ದು ಅನುಮತಿ ನೀಡಲಾಯಿತು)**

ಪಾಟೀಸವಾಲುಃ ಮಾನ್ಯ ಸ ಸ ಅ ರವರಿಂದ ಃ

ದಿಃ 01.04.2017 ರಂದು ಸಂಜೆ 7.15 ಗಂಟೆಗೆ ನನ್ನ ಅಂಗಡಿಯಲ್ಲಿ 6-7 ವರ್ಷಗಳಿಂದ ಕೆಲಸ ಮಾಡಿಕೊಂಡಿದ್ದ ರಾಜಣ್ಣರವರು ವ್ಯಾಪಾರ ಮಾಡುತ್ತಿದ್ದಾಗ ಸಂಜೆ 5.15 ರಲ್ಲಿ 3 ಜನ ಹುಡುಗರು ಒಂದು ಕಪ್ಪು ಬಣ್ಣದ ಹೊಂಡಾ ಡಿಯೋ ಸ್ಕೂಟರಿನಲ್ಲಿ ಬಂದು 3 ಜನರು ಅಂಗಡಿಗೆ ಬಂದು ಅದರಲ್ಲಿ ಒಬ್ಬ ಹುಡುಗ nitrovate-16 ಮಾತ್ರೆ ಕೊಡಿ ಎಂದು ಕೇಳಿರುತ್ತಾನೆ ಎಂದರೆ ಸರಿಯಲ್ಲ. ಸದರಿ ಮಾತ್ರೆಯು ಉದ್ದೀಪನ ಮಾತ್ರೆಗಳಾಗಿದ್ದು ಅವನ್ನು ನಮ್ಮ ಅಂಗಡಿಯಲ್ಲಿ ಮಾರಾಟ ಮಾಡುವುದಿಲ್ಲ ಎಂದು ಹೇಳಿದ್ದಕ್ಕೆ ಮಾತ್ರೆ ಕೊಡದಿದ್ದರ ನಾನು ಬಿಡುವುದಿಲ್ಲ ಎಂದು ಬೋಳಿಮಕ್ಕಳಾ ಎಂದು ಅವಾಚ್ಯವಾಗಿ ಬೈದರು ಎಂದರೆ ಸರಿಯಲ್ಲ. ನಂತರ 3 ಜನರಲ್ಲಿ ಒಬ್ಬ ಸ್ಕೂಟರಿನ ಬಳಿ ಹೋಗಿ ಸ್ಕೂಟರ್ ಸ್ಟಾರ್ಟ್ ಮಾಡಿ ನಿಲ್ಲಿಸಿಕೊಂಡಿದ್ದ, ಒಬ್ಬ ಸ್ಕೂಟರಿನಿಂದ ಮಚ್ ಅನ್ನು ತಂದಿರುತ್ತಾರೆ ಎಂದರೆ ಸರಿಯಲ್ಲ. ಇನ್ನೊಬ್ಬ ಚಾಸಾ 2 ರವರನ್ನು ಹಿಡಿದುಕೊಂಡು ಎಳೆದನು ಎಂದರೆ ಸರಿಯಲ್ಲ. ಮಚ್ಚು ಹಿಡಿದುಕೊಂಡ ಹುಡುಗ ಮಚ್ ಅನ್ನು ಬಿಸಾಡಿ ಚಾಸಾ 2 ರವರ ತಲೆಗೆ ಹೊಡೆದನು ಎಂದರೆ ಸರಿಯಲ್ಲ. ನಂತರ ನಾನು ಕೂಗಾಡಿದಾಗ 3 ಜನ ಹುಡುಗರು ಚೆಕ್ ಪೋಸ್ಟ್ ಕಡೆಗೆ ಸ್ಕೂಟರಿನಲ್ಲಿ ಹೋದರು ಎಂದರೆ ಸರಿಯಲ್ಲ. ಮಚ್ ಅನ್ನು ನನ್ನ ಅಂಗಡಿಯ ಮುಂದೆ ಬಿಸಾಡಿದ್ದರು ಎಂದರೆ ಸರಿಯಲ್ಲ.

ಈ ಬಗ್ಗೆ ನಾನು ನಿಪಿ1 ರಂತೆ ದೂರು ನೀಡಿರುತ್ತೇನೆ ಎಂದರೆ ಸರಿಯಲ್ಲ.

Cc1359/2017. Cw1.

ನಂತರ, ದಿಃ02.04.2017 ರಂದು ಬೆಳಗ್ಗೆ 10.30 ರಿಂದ 11 ರಲ್ಲಿ ನಾನು ತೋರಿಸಿದ ಜಾಗದಲ್ಲಿ ಪೊಲೀಸರು ಚಾಸಾ 3, 4 ರವರ ಸಮಕ್ಷಮ ನಿಪಿ2 ರಂತೆ ಸ್ಥಳ ಮಹಜರ್ ಮಾಡಿ ಮಚ್ ಅನ್ನು ಅಮಾನತ್ತು ಪಡಿಸಿಕೊಂಡು ನಿಪಿ 3, 4 ರಂತೆ ಪೋಟೋ ತೆಗೆದಿರುತ್ತಾರೆ ಎಂದರೆ ಸರಿಯಲ್ಲ.

2 ನೇ ಆರೋಪಿ ಮತ್ತು ನಾನು ರಾಜೀ ಮಾಡಿಕೊಂಡಿರುತ್ತೇನ ಎಂದರೆ ಸರಿ. ಆ ಕಾರಣದಿಂದ ಆರೋಪಿತರಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀಸವಾಲುಃ ಆರೋಪಿ ಪರ ಶ್ರೀ. ಹೆಚ್ ಎನ್ ಎಸ್ ವಕೀಲರಿಂದಃ ಇರುವುದಿಲ್ಲ.
ಮರು ವಿಚಾರಣೆ ಃ ಇಲ್ಲ
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿದನ್ನು ಬೆರಳಚ್ಚುಗಾರರಿಗೆ ಉಕ್ತಲೇಖನ ನೀಡಿ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸ ಇ ಒ,

Sd/-
ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು
ಪ್ರಃದಃನ್ಯಾಃದಂ.,ರವರು, ಕಡೂರು.